ಅಹನಿಶಂ ಜಾಗರಣೀಯಂ ಲೋಕಹಿತಂ ಮಮ ಕರಣೀಯಂ

# ಪುಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ



ಸೇವಾ ದೀಪಾವಳಿಯ ಪ್ರಯುಕ್ತ ಅಮೇರಿಕಾದ ವಿಸ್ಕಾನ್ಸನ್ ರಾಜ್ಯದ ಸನ್ ಪ್ರೈರಿ ನಗರದ ನಿರ್ಗತಿಕರಿಗಾಗಿ 13 ಕ್ವಿನ್ಟಾಲ್‌ನಷ್ಟು ಆಹಾರ ಸಂಗ್ರಹಿಸಿ ವಿತರಿಸಿದ ಹಿಂದೂ ಸ್ವಯಂಸೇವಕ ಸಂಘದ ಸ್ವಯಂಸೇವಕರು. ಕಳೆದ ವರ್ಷದ ದೀಪಾವಳಿಯಲ್ಲಿ ಅಮೇರಿಕಾದ 26 ರಾಜ್ಯಗಳ 225 ನಗರಗಳಲ್ಲಿ ಹೆಚ್ ಎಸ್ ಎಸ್ ಆಹಾರ ವಿತರಿಸಿತ್ತು.

ಸಂಪುಟ : 43 | ಸಂಚಿಕೆ : 09 | ಪ್ಲವ – ಮಾರ್ಗಶಿರ | ಕಲಿಯುಗಾಬ್ದ 5123 | 15–12–2021 | ತ್ರೈವಾರ್ಷಿಕ : ರೂ. 150.00 | ಬಿಡಿ ಪ್ರತಿ : ರೂ. 3.00 | ಪುಟಗಳು : 4

## ನಮಗೆ ಭಿಕ್ಷೆ ಬೇಡುವ ಆಸೆಯಿಲ್ಲ, ನಮಗೊಂದು ಕೆಲಸ ಕೊಡಿ ಮಂಗಳಮುಖಿಯ ಮನದಾಳದ ಮಾತು

ಸಾಮಾನ್ಯವಾಗಿ ನಗರ ಪ್ರದೇಶಗಳ ಸಿಗ್ನಲ್ ಗಳ ಬಳಿ, ಬಸ್ ಇಲ್ಲವೇ ರೈಲ್ವೇ ನಿಲ್ದಾಣಗಳ ಬಳಿ ಹಿಂಡು ಹಿಂಡಾಗಿ ಚಪ್ಪಾಳೆ ಹೊಡೆದುಕೊಂಡು ಭಿಕ್ಷೆ ಬೇಡುವ ಮಂಗಳ ಮುಖಿಯರನ್ನು ಕಂಡ ಕೂಡಲೇ, ತಾತ್ಸಾರದ ಭಾವನೆ ಮೂಡುತ್ತದೆ. ಕೆಲವರು 'ಏ ಅಲ್ನೋಡ್ರೋ...' ಎಂದರೆ ಮತ್ತೆ ಕೆಲವರು ಇನ್ನೂ ಕೆಟ್ಟದಾಗಿ, 'ಅಲ್ನೋಡ್ರೋ ಚಕ್ಕಾಗಳು ಬಂದರು', 'ಅಲ್ನೋಡ್ರೋ ಕೋಜಾ ಬಂದರು' ಎಂದು ಛೇಡಿಸಿದರೆ, ಇನ್ನೂ ಕೆಲವರೂ ಇನ್ನೂ ಅಸಭ್ಯ ರೀತಿಯಲ್ಲಿ ಆಡಿಕೊಳ್ಳುವುದನ್ನು ನೋಡಿದ್ದೇವೆ. ತಮಗೇ ಅರಿವಿಲ್ಲದಂತೆ ತಮ್ಮ ದೇಹದಲ್ಲಿ ಆಗುವ ಬದಲಾವಣೆಯಿಂದಾಗಿ, ತಮ್ಮದಲ್ಲದ ತಪ್ಪಿಗಾಗಿ ಹುಟ್ಟಿದ ಮನೆಯವರಿಂದಲೇ ತಿರಸ್ಕೃತಗೊಂಡು, ಸಮಾಜದ ದೃಷ್ಟಿಯಲ್ಲಿ ಅಸ್ಪೃಶ್ಯರಾಗಿ, ಜನರನ್ನು ಕಾಡಿ ಬೇಡಿ ಇಲ್ಲವೇ ಇನ್ನಾವುದೋ ರೀತಿಯಲ್ಲಿ ದೌರ್ಭಾಗ್ಯಪೂರ್ಣ ಜೀವನ ಸಾಗಿಸುವವರ ಮನದಾಳದ ಭಾವನೆಗಳು ಹೇಗಿರುತ್ತವೆ ಎಂದು ಹೆಚ್ಚಿನ ಜನ ಯೋಚಿಸಿರವುದಿಲ್ಲ. ಇತ್ತೀಚೆಗೆ ಕರ್ನಾಟಕ ಕಲಾಗ್ರಾಮದಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಆಶ್ರಯದಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ, ಕರ್ನಾಟಕ ಮಂಗಳಮುಖಿ ಫೌಂಡೇಷನ್ನಿನ ಪ್ರಧಾನ ಕಾರ್ಯದರ್ಶಿಗಳಾದ ಅರುಂಧತಿಯವರು ತಮ್ಮ ಭಾವನೆಗಳನ್ನು, ಅನುಭವಗಳನ್ನು ಹಂಚಿಕೊಂಡರು. ಮಂಗಳಮುಖಿಯರ ನಿಜವಾದ ಕಷ್ಟಗಳನ್ನು ತೆರೆದಿಟ್ಟ ಅವರ ಮಾತುಗಳನ್ನು ಕೇಳಿದ ಅಲ್ಲಿನ ಸಭಾಸದರಿಗೆ ನಿಜಕ್ಕೂ ಕರುಳು ಚುರುಕ್ ಅನ್ನಿಸಿದ್ದು ಸುಳ್ಳಲ್ಲ. ಅವರ ಮಾತಿನ ಆಯ್ದ ಭಾಗ ಇಲ್ಲಿದೆ. ತಪ್ಪದೇ ಓದಿ.

ಸರ್ವೇಸಾಮಾನ್ಯವಾಗಿ ಮಂಗಳಮುಖಿಯರನ್ನು ನೋಡಿದ ತಕ್ಷಣ ಕಡಿದರೆ ನಾಲ್ಕು ಆಳಾಗುವಂತಿದ್ದಾರೆ ಸುಮ್ಮನೇ ಭಿಕ್ಷೆ ಬೇಡುವ ಬದಲು ಯಾವುದಾದರೂ ಕೆಲಸ ಮಾಡಿಕೊಂಡು ನೆಮ್ಮದಿಯ ಜೀವನ ನಡೆಸಬಾರದಾ? ಎಂದೇ ಎಲ್ಲರೂ ಉದ್ಗಾರವೆತ್ತುತ್ತಾರಾದರೂ, ಮನೆಯ ಕೆಲಸ, ಅಡುಗೆ ಕೆಲಸ, ಸ್ವಲ್ಪ ಓದು ಬರಹ ತಿಳಿದಿರುವುದರಿಂದ ಯಾವುದಾದರೂ ಕಛೇರಿಗಳಲ್ಲಿ ಕೆಲಸ ಕೊಡಿ ಎಂದು ಕೇಳಿದರೆ ಅವರಿಗೆ ಕೆಲಸ ಕೊಡುವವರಿಗಿಂತಲೂ ತಾತ್ಸಾರ ಮಾಡುವವರೇ ಹೆಚ್ಚು. ಕೆಲವೊಂದು ಸಭೆ ಸಮಾರಂಭಗಳಲ್ಲಿ ಮಾತಿನ ಭರದಲ್ಲೋ ಅಥವಾ ನೆರೆದಿದ್ದವರ ಚಪ್ಪಾಳೆ ಗಿಟ್ಟಿಸಿಕೊಳ್ಳಲೆಂದೋ, ನಾಳೆ ನಮ್ಮ ಕಛೇರಿಗೋ ಇಲ್ಲವೇ ನಮ್ಮ ಮನೆಗೆ ಬನ್ನಿ ನಿಮಗೆ ಕೆಲಸ ಕೊಡುತ್ತೇವೆ ಎಂದು ಹೇಳುವವರನ್ನು ಮಾರನೇ ದಿನ ಸಂಪರ್ಕಿಸಲು ಹೋದರೆ ಒಂದೋ ಫೋನ್ ಎತ್ತುವುದಿಲ್ಲ ಇಲ್ಲವೇ, ಮನೆಯಲ್ಲಿ ಇದ್ದರೂ ಹೊರಗೆಲ್ಲೋ ಹೋಗಿದ್ದಾರೆ ಎಂಬ ಸಬೂಬು ಹೇಳಿ ಸಾಗಿ ಹಾಕುವವರೇ ಹೆಚ್ಚು. ಅದೊಮ್ಮೆ ಹೀಗೆ ಹೇಳಿದ ಮಹಿಳೆಯೊಬ್ಬರ ಮನೆಗೆ ಹೋದಾಗ, 'ನನಗೇನೋ ನಿಮಗೆ ಕೆಲಸ ಕೊಡಲು ಇಷ್ಟ. ಆದರೆ, ನಮ್ಮನೆಯವರು ಮತ್ತು ಅಕ್ಕಪಕ್ಕದವರು ಒಪ್ಪುತ್ತಿಲ್ಲ, ಹಾಗಾಗಿ ಏನೂ ಬೇಜಾರು ಮಾಡಿಕೊಳ್ಳಬೇಡಿ' ಎಂದು ನಯವಾಗಿ ಹೇಳಿ ಒಂದು ತಟ್ಟೆಯಲ್ಲಿ ಅರಿಶಿನ ಕುಂಕುಮ ಸೀರೆ ಬಳೆಯ ಜೊತೆಗೆ ಒಂದಷ್ಟು ಹಣ ನೀಡಲು ಬಂದಾಗ ನಾನು, ಕೇವಲ ಅರಿಶಿನ ಕುಂಕುಮವನ್ನು ತೆಗೆದುಕೊಂಡು ಹಣ ಮತ್ತು ಸೀರೆಗಳನ್ನು ತೆಗೆದುಕೊಳ್ಳಲು ಅಷ್ಟೇ ವಿನಯದಿಂದ ನಿರಾಕರಿಸಿದೆ. 'ನಮಗೆ ಭಿಕ್ಷೆ ಬೇಡಲು ಆಸೆಯಿಲ್ಲ. ನಮಗೊಂದು ಕೆಲಸ ಕೊಡಿ. ನಾವೂ ಎಲ್ಲರಂತೆ ದುಡಿದು ಸಮಾಜದಲ್ಲಿ ನೆಮ್ಮದಿಯಿಂದ ಬಾಳುತ್ತೇವೆ' ಎಂದು ಹೇಳಿದೆ.

ಒಮ್ಮೆ ನಗರದ ಸರ್ಕಲ್ ಬಳಿ ಭಿಕ್ಷೇ ಬೇಡುತ್ತಾ ನಿಂತಿದ್ದಾಗ ಬೈಕಿನಲ್ಲಿ ಬಂದ ವ್ಯಕ್ತಿಯೊಬ್ಬ ಹಿಂದಿನಿಂದ ಏಕಾಏಕಿ ಹೊಡೆದು ಹೋದ. ಅರೇ, ಆತ ಹಾಗೆ ಸುಮ್ಮನೆ ಏಕೆ ಹೊಡೆದ ಎಂದು ವಿಚಾರಿಸುವ ಸಲುವಾಗಿ ಆಟೋವೊಂದನ್ನು ಹಿಡಿದು ಆತನನನ್ನು ಹಿಂಬಾಲಿಸಿ ವಿಚಾರಿಸಿದಾಗ 'ನಾಚಿಕೆ ಆಗೋದಿಲ್ವಾ ಹೀಗೆ ಭಿಕ್ಷೆ ಬೇಡುವುದಕ್ಕೇ?' ಎಂದು ಏರು ದನಿಯಲ್ಲಿ ಪ್ರಶ್ನಿಸಿದ. ಆಗ ನಾನು ಕೂಡ ಧ್ವನಿ ಏರಿಸಿ ಮಾತನಾಡಿದೆ. ಕೆಲವು ದಿನಗಳ ಹಿಂದೆ ನಿಮ್ಮವರೊಬ್ಬರು ನಾಗವಾರ ಬಳಿಯ ಸಿಗ್ನಲ್ಲಿನಲ್ಲಿ ನನ್ನ ಕೊರಳಿನಲ್ಲಿದ್ದ ಚಿನ್ನದ ಸರವನ್ನು ಲಪಟಾಯಿಸಿದ್ದರು. ಹಾಗಾಗಿ ಹೊಡೆದೆ.' ಎಂಬ ಸಬೂಬು ನೀಡಿದ. ವಾದ ವಿವಾದ ನಡೆದು ಕಡೆಗೆ ಪೋಲೀಸರ ಮಧ್ಯಸ್ಥಿಕೆಯಲ್ಲಿ ಆತ ತನ್ನ ತಪ್ಪನ್ನು ಒಪ್ಪಿಕೊಂಡು ಕ್ಷಮೆ ಕೇಳಿದ.



ನಾವೂ ಸಹಾ ನಿಮ್ಮಂತೆಯೇ ಈ ದೇಶದಲ್ಲಿ ಹುಟ್ಟಿದವರು. ನಾವು ಹುಟ್ಟುವಾಗ ಗಂಡಾಗಿ ಹುಟ್ಟಿದರೂ, ಬೆಳೆಯುತ್ತಾ ಹೋದಂತೆಲ್ಲಾ ದೇಹದಲ್ಲಾಗುವ ಕೆಲವು ವೈಪರೀತ್ಯಗಳಿಂದಾಗಿ ಹೆಣ್ಣಿನಂತಾಗಿ ಹೋಗುವುದರ ಹಿಂದೆ ನಮ್ಮದೇನೂ ತಪ್ಪಿರುವುದಿಲ್ಲ. ನಾವೂ ಕೂಡ ಈ ದೇಶದ ಪ್ರಜೆಗಳೇ ಅಲ್ಲವೇ? ನಮಗೇಕೆ ತಾತ್ಸಾರ ತೋರಬೇಕು? ಹೆತ್ತವರು ಸಮಾಜಕ್ಕೆ ಅಂಜಿ ನಮ್ಮನ್ನೇಕೆ ಮನೆಯಿಂದ ಹೊರಗೆ ಹಾಕಬೇಕು? ಹಾಗೆ ಮನೆಯಿಂದ ಹೊರದೂಡಲ್ಪಟ್ಟಾಗ ಜೀವನವನ್ನು ಹೇಗೆ ಸಾಧಿಸಬೇಕು?

ಮನೆಯೇ ಮೊದಲ ಪಾಠ ಶಾಲೆ, ಜನನಿ ತಾನೆ ಮೊದಲ ಗುರುವು ಎನ್ನುವುದು ನಮಗೆಲ್ಲರಿಗೂ ತಿಳಿದಿರುವ ವಿಷಯ. ಆದರೆ ಹೆತ್ತ ತಾಯಿಯೇ ನಮ್ಮನ್ನು ಹೊರಗೆ ಹಾಕಿದಾಗ ನಮಗೆ ಆಚಾರ ವಿಚಾರಗಳನ್ನು ಕಲಿಸಿಕೊಡುವವರು ಯಾರು? ನಮ್ಮೊಂದಿಗೆ ಪುಂಡುಪೋಕರಿಗಳೇ ಸುತ್ತಾಡುವ ಕಾರಣ, ಸಮಾಜದಲ್ಲಿ ನಮ್ಮಿಂದಾಗಿ ಕೆಲವೊಂದು ಅಹಿತಕರ ಘಟನೆಗಳು ನಡೆದಿರುವುದು ಸತ್ಯ. ಅದಕ್ಕಾಗಿ ಕ್ಷಮೆ ಯಾಚಿಸುತ್ತೇವೆ. ಆದರೆ ನಮ್ಮನ್ನು ಕ್ಷಮಿಸಿ ನಮಗೊಂದು ಬದುಕನ್ನು ಕಟ್ಟಿಕೊಳ್ಳಲು ಅವಕಾಶ ನೀಡುವವರು ಯಾರು?

ಇನ್ನೂ ಕೆಲವು ಸ್ವಘೋಷಿತ ಬುದ್ದಿಜೀವಿಗಳು ಎಂದು ಕರೆದುಕೊಳ್ಳುವ ಸಂಘಟನೆಗಳು ಇದೇ ಮಂಗಳಮುಖಿಯರನ್ನು ಬಳಸಿಕೊಂಡು ಕೆಲವೊಂದು ಕಾರ್ಯಾಗಾರಗಳನ್ನು ನಡೆಸಿ ಸರ್ಕಾರದಿಂದಲೂ ಮತ್ತು ಕೆಲವು ಖಾಸಗಿ ಸಂಸ್ಥೆಗಳ ಸಿ ಎಸ್ ಆರ್ ಫಂಡ್ ಹಣವನ್ನು ನುಂಗಿ ನೀವು ಚಕ್ಕಾಗಳು ನೀವು ನಮ್ಮೊಂದಿಗೆ ಇರಲು ಸಾಧ್ಯವಿಲ್ಲ ಎಂದು ಹೊರಹಾಕಿದ ಉದಾಹರಣೆಗಳಿವೆ. ಇದರ ಬದಲು ನಮ್ಮನ್ನು ನೋಡಿದ ತಕ್ಷಣ, ಅರೇ, ಅಕ್ಕಾ ಬಾ! ಒಂದು ಟೀ ಕುಡಿಯೋಣ, ಅರೇ ಬಾ ಅಕ್ಕಾ ಒಂದು ಸೆಲ್ಫೀ ತೆಗೆಸಿಕೊಳ್ಳೋಣ. ಇವತ್ತು ನಮ್ಮನೇ ಪೂಜೆಗೆ ಬಾ ಅಕ್ಕಾ ಅಂತ ಕರೆದರೆ ಸಾಕು. ನಮಗೆ ಅದೇ ಖುಷಿ. ನಮಗೆ ಯಾರ ಕರುಣೆಯೂ ಬೇಡ. ನಾವೂ ನಿಮ್ಮಲ್ಲಿ ಒಬ್ಬರು ಎಂದು ಸಮಾನವಾಗಿ ನೋಡಿ ನಮ್ಮ ಶಕ್ತಿ ಸಾಮರ್ಥ್ಯಕ್ಕೆ ಅನುಗುಣವಾಗಿ ಕೆಲಸವನ್ನು ಕೊಡಿ ಅಷ್ಟೇ ಸಾಕು.

ಕೆಲಸ ಸಿಗದ ಕಾರಣ ಜೀವನ ನಡೆಸಲು ಅನಿವಾರ್ಯವಾಗಿ ಕೆಲವರು ಭಿಕ್ಷೆ ಬೇಡಿದರೆ, ಇನ್ನೂ ಕೆಲವರು ಲೈಂಗಿಕ ವೃತ್ತಿಯಲ್ಲಿ ತೊಡಗಿಸಿಕೊಳ್ಳುವ ಮೂಲಕ ಮಂಗಳಮುಖಿಯರಿಗೆ ಕೆಟ್ಟ ಹೆಸರನ್ನು ತರುತ್ತಿದ್ದಾರೆ. ಇದೊಂದು ಸುಲಭವಾಗಿ ಹಣ ಗಳಿಸಿಕೊಳ್ಳುವ ದಂಧೆ ಎಂದು ಭಾವಿಸಿ ಕೆಲವು ಗಂಡಸರು ಸೀರೆ ಉಟ್ಟುಕೊಂಡು, ಹೆಂಗಸರನ್ನು ಮುಂದಿಟ್ಟುಕೊಂಡು ಅಂಗಡಿ ಮುಗ್ಗಟ್ಟುಗಳಲ್ಲಿ ಬಲವಂತವಾಗಿ ಭಿಕ್ಷೆ ಬೇಡುವುದು, ಕೊಡದೇ ಹೋದಲ್ಲಿ ಗಲ್ಲಾ ಪೆಟ್ಟಿಗೆಗೇ ಕೈ ಹಾಕುವ



ಹೀನ ಕೃತ್ಯಕ್ಕೂ ಮುಂದಾಗುವುದೂ ಇದೆ. ಇದು ಖಂಡನೀಯ. ಅಂತಹವರನ್ನು ನಿರ್ದಾಕ್ಷಿಣ್ಯವಾಗಿ ಪೋಲೀಸರ ವಶಕ್ಕೆ ಹಿಡಿದುಕೊಡಿ.

ಒಳ್ಳೆಯ ಸಂಗತಿಯೆಂದರೆ, ಇಂದು ಕಾಲ ಬದಲಾಗಿದೆ. ಆರಂಭದಲ್ಲಿ ಮಂಗಳಮುಖಿಯರಿಗೆ ಬಾಡಿಗೆಗೆ ಮನೆ ಕೊಡಲು ಹಿಂಜರಿಯುತ್ತಿದ್ದವರು ಇಂದು ಬಾಡಿಗೆ ಕೊಡುತ್ತಿದ್ದಾರೆ. ಸರ್ಕಾರವೂ ಮಂಗಳಮುಖಿಯರಿಗೆ ವಿಶೇಷ ಸೌಲಭ್ಯವನ್ನು ನೀಡಲು ಮುಂದಾಗಿರುವುದಲ್ಲದೇ, ಮಂಗಳಮುಖಿಯರ ಕ್ಷೇಮಾಭಿವೃದ್ಧಿಗಾಗಿ ಮಂಡಲಿಯೊಂದನ್ನು ಆರಂಭಿಸುವುದಾಗಿ ಭರವಸೆ ನೀಡಿರುವುದು ಉತ್ತಮ ಬೆಳವಣಿಗೆ. ಸುಮ್ಮನೇ ಗಂಡು ಮಕ್ಕಳು ಸೀರೆಯುಟ್ಟುಕೊಂಡಲ್ಲಿ ಮಂಗಳಮುಖಿಯರಾಗುವುದಿಲ್ಲ. ಮಂಗಳಮುಖಿಯರಿಗೆಂದೇ ವಿಶೇಷವಾದ ರೀತಿ ರಿವಾಜುಗಳಿವೆ. ಸಮಾಜ ಇತರೇ ಎಲ್ಲಾ ಸಂಪ್ರದಾಯಗಳನ್ನು ಒಪ್ಪಿಕೊಳ್ಳುವಂತೆ ನಮ್ಮ ಹಿಜಡಾ ಸಂಪ್ರದಾಯವನ್ನೇಕೆ ಒಪ್ಪಿಕೊಳ್ಳುವುದಿಲ್ಲ? ಮಂಗಳ ಮುಖಿರದ್ದೇ ಆದ ಬದಾಯಿ ಎಂಬ ಸಂಪ್ರದಾಯವಿದ್ದು, ಸ್ವಾಮೀಜಿಗಳನ್ನು ಕರೆದು ಪಾದಪೂಜೆ ಮಾಡಿ ಫಲಪುಷ್ಪಗಳನ್ನು ನೀಡುವಂತೆ ಇನ್ನೂ ಅನೇಕ ಕಡೆ ತಮ್ಮ ಮನೆಗಳ ಶುಭ ಸಮಾರಂಭಗಳಲ್ಲಿ ಮಂಗಳಮುಖಿಯರನ್ನೂ ಕರೆದು ಮುತ್ತೈದೆ ಸುಹಾಸಿನಿ ಎನ್ನುವಂತೆ ಮಡಿಲು ತುಂಬಿ ಕೈಲಾದ ಮಟ್ಟಿಗಿನ ಹಣವನ್ನು ನೀಡಿ ಕಳುಹಿಸಿಸುವ ಸಂಪ್ರದಾಯವೂ ಇದೆ. ಇನ್ನು ಬಹಳಷ್ಟು ಕಡೆ ಮಂಗಳಮುಖಿಯರಿಗೆ 10 ರೂಪಾಯಿಗಳನ್ನು ಕೊಟ್ಟು 1 ರೂಪಾಯಿ ಪಡೆದುಕೊಂಡಲ್ಲಿ ಒಳ್ಳೆಯದಾಗುತ್ತದೆ ಎನ್ನುವ ಸಂಪ್ರದಾಯವೂ ಇರುವಾಗ ಸುಖಾಸುಮ್ಮನೇ ಮಂಗಳಮುಖಿಯರನ್ನು ಭಿಕ್ಷೆ ಬೇಡುವುದಕ್ಕೆ ಮಾತ್ರವೇ ಸೀಮಿತಗೊಳಿಸದಿರಿ.

ಜೀವನದಲ್ಲಿ ಏಳುಬೀಳು ಕಷ್ಟಸುಖಗಳು ಇರುವಂತೆ ನಮ್ಮ ಬದುಕಿನಲ್ಲಿಯೂ ಈ ರೀತಿಯ ಹತ್ತು ಹಲವಾರು ಎಡರು ತೊಡರುಗಳು ಇರುತ್ತವೆ. ಆದರೆ ಅವೆಲ್ಲವುಗಳನ್ನೂ ಮೆಟ್ಟಿ ನಿಲ್ಲುವ ಸಾಮರ್ಥ್ಯ ನಮ್ಮಲ್ಲಿದೆ. ಹಾಗಾಗಿ, ಮಂಗಳಮುಖಿಯರತ್ತ ತಾತ್ಸಾರ ತೋರದೇ ಅವರಿಗೂ ಗೌರವಯುತವದ ಸ್ಥಾನಮಾನವನ್ನು ನೀಡುವ ಮೂಲಕ ನಮಗೂ ಸಮಾಜದಲ್ಲಿ ನೆಮ್ಮದಿಯಾಗಿ ಬಾಳಲು ಅವಕಾಶವನ್ನು ಕೊಡಿ ಎಂಬುದಷ್ಟೇ ನಮ್ಮ ಪ್ರಾರ್ಥನೆ.

## ಸಂಸ್ಮರಣೆ

# ಡಾ. ಕೆ. ಎಸ್. ನಾರಾಯಣಾಚಾರ್ಯ (30 ಅಕ್ಟೋಬರ್ 1933 – 26 ನವೆಂಬರ್ 2021)

ಭಾರತೀಯ ಸಾಹಿತ್ಯದ ಪದ್ಧತಿಯಲ್ಲಿ ವ್ಯಾಖ್ಯಾನಕ್ಕೆ ಅದರದ್ದೇ ಮಹತ್ತು, ಇತಿಹಾಸ ಹಾಗು ಪರಂಪರೆಗಳಿವೆ. ರಾಮಾಯಣ ಮಹಾಭಾರತಾದಿಗಳಿಂದ ಹಿಡಿದು ಪುರಾಣ, ಭಾಗವತ, ವೇದಾಂತಗಳನ್ನೂ ಒಳಗೊಂಡು ಪ್ರತಿಯೊಂದಕ್ಕೂ ವಿಶಿಷ್ಟವಾದ ಕಾವ್ಯಾತ್ಮಕವಾದ ಆದರೆ ಅಷ್ಟೇ ತರ್ಕಬದ್ಧವಾದ ಭಾವಪೂರ್ಣತೆಯಾದರೆ ಅದರಷ್ಟೇ ವಸ್ತುನಿಷ್ಠ ತಳಹದಿಯಿದೆ. ಇಂಥ ವ್ಯಾಖ್ಯಾನ –ಲೇಖನಗಳ ಮೂಲಕ ಕನ್ನಡದ ಸಾರಸ್ವತ ಲೋಕದಲ್ಲಿ ವಿಶೇಷ ಸ್ಥಾನ ಪಡೆದವರು ಡಾ. ಕೆ .ಎಸ್ ನಾರಾಯಣಾಚಾರ್ಯರು.

ತಾವು ವ್ಯಾಖ್ಯಾನಿಕೆಗೆಂದು ಕೈಗೆತ್ತಿಕೊಂಡ ಪ್ರತಿಯೊಂದು ಶ್ಲೋಕ, ಅದರ ಸಂದರ್ಭ, ಅರ್ಥ ಒಟ್ಟಾರೆಯಾಗಿ ಆ ಕಾವ್ಯ ಅಥವಾ ಕೃತಿ ಹುಟ್ಟಿಸುವ ರಸ, ಮೂಡಿಸುವ ಧ್ವನಿ, ಚಿತ್ರಸುವ ಅಲಂಕಾರಗಳು, ಮತ್ತು ಇವೆಲ್ಲದರ ಹೃದ್ಯ ವಿವರಣೆ ವಿಶ್ಲೇಷಣೆಗಳ ಮೂಲಕ ಆಚಾರ್ಯರು ಸಾಹಿತ್ಯ ಪ್ರಿಯರಿಗೆ ಹತ್ತಿರವಾಗಿದ್ದರು. ಭಾರತೀಯ ಸಾಹಿತ್ಯದ ಆಖ್ಯಾನ – ವ್ಯಾಖ್ಯಾನಗಳನ್ನ ಅವುಗಳ ಯಥಾವತ್ ರೂಪ, ಲಾವಣ್ಯಗಳೊಂದಿಗೆ ಸಾಮಯಿಕವಾಗಿ ತಿಳಿಯಪಡಿಸುವ, ಸಾಮಾನ್ಯರಿಗೂ ಮನಮುಟ್ಟುವಂತೆ ವಿಶದೀಕರಿಸುವ, ಅದ್ಭುತ – ಅಗಾಧ ದೃಷ್ಟಿ ಸಾಮರ್ಥ್ಯಗಳು ಆಚಾರ್ಯರಿಗಿತ್ತು.

ಪಾಶ್ಚತ್ಯರು ಕಾವ್ಯ–ಕೃತಿಗಳನ್ನ ಅಳೆಯುವ 'ವಿಮರ್ಶಾ ಪದ್ಧತಿ' ಎಂಬ ಹೊಸ ಬಗೆಯ ವಾದವನ್ನು ಮುಂದಿರಿಸಿ ಅದನ್ನೇ ಭಾರತೀಯ ಸಾಹಿತ್ಯದ ಆಳವನ್ನು ಶೋಧಿಸುವ ಅಳತೆಗೋಲಾಗಿ ತಾವೇ ಹೇರಿದ ಲಭಿಚಿಜಜಟಟಿ ಪದ್ಧತಿಯ ಮೂಲಕ ತಂದರು. ಅದರ ದೂರಗಾಮಿ ಪರಿಣಾಮಗಳನ್ನ ಸರಿಯಾಗಿ ಗ್ರಹಿಸದೆ ಮೋಸಹೋದ ಅನೇಕರು ಭಾರತೀಯ ಸಾಹಿತ್ಯದ ಬಗೆಗೆ, ನಮ್ಮ ಭಾಷಾ ವೈವಿಧ್ಯ, ಅನೂಚಾನವಾಗಿ ನಡೆದುಬಂದ ಕಾವ್ಯ ಪರಂಪರೆಗಳ ಬಗ್ಗೆಯೇ ಕೀಳರಿಮೆ ಬೆಳೆಸಿಕೊಂಡರು.

ಇಂಥ ಸಂದರ್ಭದಲ್ಲಿಯೇ ಆಚಾರ್ಯರು ಸ್ವಂತದ ಗಾಢ ಅಧ್ಯಯನ ಹಾಗು ಅಧ್ಯಾಪನಗಳ ಅನುಭಗಳ ಆಧಾರದ ಮೇಲೆ ಭಾರತೀಯ ಮೂಲಕೃತಿಗಳಲ್ಲಿನ ವಿಶೇಷಾಂಶಗಳನ್ನು ಗುರುತಿಸಿ, ಅವುಗಳ ಕ್ರಮ , ಸಂದರ್ಭ, ನಿರೂಪಣಾ ವೈಶಿಷ್ಟ್ಯಗಳ ಪರಾಮರ್ಶೆಗೆ ತೊಡಗಿದ್ದು.

ಅವರ ವ್ಯಾಖ್ಯಾನದ ಪರಿಯೇ ಅನನ್ಯ. ವಾಲ್ಮೀಕಿ – ವ್ಯಾಸರ ಮಹರ್ಷಿತ್ವವನ್ನು ಗೌರವಿಸುತ್ತಲೇ ಅವರ ದೈವಾಂಶಗಳೇ ಆ ಕೃತಿಗಳ ಆಸ್ವಾದನೆಗೆ ತೊಡಕಾಗಿದ್ದನ್ನು ಗಮನಿಸಿದ ಅವರು, ಆ ಎಲ್ಲ ಅಮರ ಕೃತಿಗಳ ಆಸ್ವಾದನೆಯನ್ನು ತೀರಾ ಸಾಮಾನ್ಯರಿಗೂ ಮನತಟ್ಟುವ ಹಾಗು ಬುದ್ಧಿಗೆಟುಕುವ ರೀತಿಯಲ್ಲಿ ಮುಟ್ಟಿಸಿದ್ದು ಅವರ ಮಹತ್ಸಾಧನೆಯೇ ಸರಿ.

ಸೀತಾಪಹರಣ, ಅಗ್ನಿಪರೀಕ್ಷೆ, ಶಂಬೂಕ ಪ್ರಸಂಗ, ವಾಲಿವಧೆಯ ಪ್ರಸಂಗಗಳೇ ಇರಲಿ, ಕೃಷ್ಣಾವತಾರ, ಆ ಹದಿನೆಂಟು ದಿನಗಳು, ರಾಜಸೂಯದ ರಾಜಕೀಯ, ಶ್ರೀ ಮಹಾಭಾರತ ಕಾಲ ನಿರ್ಣಯ, ಶ್ರೀ ಕೃಷ್ಣಾವತಾರದ ಕೊನೆ ಗಳಿಗೆಗಳು, ಆ ಹದಿನೆಂಟು ದಿನಗಳು ಹೀಗೆ ಒಂದಕ್ಕಿಂತ ಮಿಗಿಲಾದ ಮತ್ತೊಂದು ಕೃತಿಗಳ ಮೂಲಕ ನಮ್ಮ ದೇವ–ದೇವತೆಯರು ದೈವಾಂಶದ ಕಟಕಟೆಯ ಅಟ್ಟದಿಂದ ಸಾಮಾನ್ಯನ ಮಟ್ಟಕ್ಕೆ ಬಂದು ನಿಂತು ಮುಕ್ತವಾಗಿ ತಮ್ಮ ದುಃಖ–



ದುಮ್ಮಾನ ಸುಖ–ನೆಮ್ಮದಿಗಳ ಪ್ರವರವನ್ನು ಹೇಳಿಕೊಳ್ಳುವ, ಕಾಲಾತೀತವಾಗಿ ನಿಲ್ಲಿಸುವ, ಅವರ ಚಿಂತನೆಗಳನ್ನು ನಮ್ಮೊಡನೆ ಹಂಚಿಕೊಳ್ಳುವ, ಸ್ವಾತಂತ್ರ್ಯ ಕಲ್ಪಿಸಿಕೊಟ್ಟ ಹೆಗ್ಗಳಿಕೆ ಆಚಾರ್ಯರಿಗೇ ಸಲ್ಲಬೇಕು. ದೇಶಕ್ಕೆರಗಿದ ಗಂಡಾಂತರಗಳು ಅವುಗಳ ಸಮೂಲ ನಾಶಕ್ಕೆ 'ಆಚಾರ್ಯ ಚಾಣಕ್ಯ' ನ ತುಡಿತ, ಸ್ವಯಂ ಅಧ್ಯಾಪಕರಾಗಿದ್ದ ಆಚಾರ್ಯರ ಲೇಖನಿಯ ಮೂಲಕ ಅಕ್ಷರರೂಪ ತಳೆದಾಗ ಇತಿಹಾಸ ಮತ್ತೊಮ್ಮೆ ನಮ್ಮ ಕಣ್ಮುಂದೆ ಬಂದು ನಿಂತಿತ್ತು.

ಶ್ರೀ ರಾಮಾಯಣದ ಮಹಾಪ್ರಸಂಗಗಳು ಪುಸ್ತಕದ ಅರಿಕೆಯಲ್ಲಿ ಆಚಾರ್ಯರೇ ಹೇಳುವಂತೆ, "... ವಾಲ್ಮೀಕಿ ಕಟ್ಟಿದ ಕಥಾ ಪ್ರಪಂಚದ ಉಳಿದೆಲ್ಲ ಕಾವ್ಯಗಳಲ್ಲಿನ ಸೂಚ್ಯವಾಚ್ಯ ವ್ಯಂಗ್ಯ ಧ್ವನ್ಯರ್ಥಗಳು ಈಗ ನವೋನವವಾಗಿ, ಒಂದು ಹೆಚ್ಚಿನ ಸಮಗ್ರತೆ, ಅಳಿಯದ ಮೆರುಗು, ಮಿಂಚು, ಆಯಾಮ ಈಗ ನಮಗೆ ದೊರೆಯುವುದು ಸಾಧ್ಯ ಎಂಬುದು ಈ ಮಾಲೆಯನ್ನು ಓದಿದವರಿಗೆ ಮನದಟ್ಟಾದೀತು!..", ಇದು ತಮ್ಮ ಬರವಣಿಗೆಯ ಮೂಲಕ ಆಚಾರ್ಯರು ಸಾಧಿಸಹೊರಟಿದ್ದ ಮತ್ತು ಸಾಧಿಸಿ ತೋರಿಸಿದ ಪ್ರಪಂಚ.

ಅದೇ ಅರಿಕೆಯಲ್ಲಿ ಮುಂದುವರೆಯುತ್ತಾ, "...ನಾವು ಚರಿತ್ರೆಯನ್ನೇ ಓದುವುದಿಲ್ಲ! 'ಹಾಗೆ ಓದುವುದು ಮಹಾಪಾಪ' ಎಂದು. 'ಸಾಧು' ದೃಷ್ಟಿಯಲ್ಲಿ ಕ್ರೂರ ಸಾತ್ವಿಕ ಮತಗಳ ಸಮೀಕರಣ ಮಾಡಿ, ಸರ್ವಧರ್ಮ ಸಮ್ಮೇಳನ ನಡೆಸುತ್ತೇವೆ!" ಇದು ಇತಿಹಾಸದ ಬಗ್ಗೆ, ಒಟ್ಟಾರೆ ಭಾರತೀಯತೆಯ ಬಗ್ಗೆ ನಾವು ತಳೆದಿರುವ ದಿವ್ಯ ನಿರ್ಲಕ್ಷ್ಯ ಮತ್ತದರಿಂದ ನಮಗುಂಟಾಗಿರುವ ಆತ್ಮಗ್ಲಾನಿಯನ್ನು ವ್ಯಂಗ್ಯದಲ್ಲಿ ತಿವಿದು ಎಚ್ಚರಿಸುವ ಆಚಾರ್ಯರ ಪರಿ.

ಅಷ್ಟು ಮಾತ್ರವೇ ಅಲ್ಲ, ಆಚಾರ್ಯರು ಕೇವಲ ಪುಸ್ತಕ ಬರೆದು ಸುಮ್ಮನಾದವರಲ್ಲ. ಪ್ರಸ್ತುತ ರಾಜಕೀಯ, ಸಂವಿಧಾನ, ಸಮಾಜವನ್ನು ಭೂತಗನ್ನಡಿಯಲ್ಲಿ ಅವಲೋಕಿಸಿ ತಮ್ಮ ಭಾರತೀಯ ವಿದ್ವತ್ ಪರಂಪರೆಯ ಪ್ರೌಢತೆಯನ್ನು ಪ್ರಸ್ತುತ ಸಮಾಜವನ್ನು ಎತ್ತಿಹಿಡಿಯುವ ದಾರಿ ತೋರಿದವರಲ್ಲಿ ಸದಾ ಮುಂದಿದ್ದವರು ಕೆ. ಎಸ್. ನಾರಾಯಣಾಚಾರ್ಯರು.

ಇದೆ ನವೆಂಬರ್ 26 ರಂದು ಅವರು ಭೌತಿಕವಾಗಿ ಕಣ್ಮರೆಯಾದರು. ಕೊನೆವರೆಗೂ ತಮ್ಮ ನೆಚ್ಚಿನ ಅಧ್ಯಯನ – ಸಂಶೋಧನೆಗಳಲ್ಲೇ ತೊಡಗಿಕೊಂಡಿದ್ದು ಆಚಾರ್ಯರ ಕಾರ್ಯಕ್ಷಮತೆಗೆ ಮತ್ತು ತಾವು ಕೈಕೊಂಡ ಕೆಲಸಗಳ ಕುರಿತಾದ ಅವರಿಗಿದ್ದ ಶ್ರದ್ಧೆಗೆ ಹಿಡಿದ ಕೈಗನ್ನಡಿ. ಪುರಾಣ – ಇತಿಹಾಸದ ಪ್ರಸಂಗಗಳ ಮೂಲಕ ವರ್ತಮಾನದ ಭಾರತಕ್ಕೆ ಕನ್ನಡಿ ಹಿಡಿಯುವ ಅವರ ಪ್ರಯತ್ನ ಸರ್ವಕಾಲಕ್ಕೂ ಸಲ್ಲುವಂಥದ್ದು.


■

## ಎಲ್ಲೋ ಕೇಳಿದ ಕಥೆ

ಒಂದು ಸಾರಿ ಭಗವಂತನಾದ ಶ್ರೀಕೃಷ್ಣನಿಗೆ ಹಣೆಯ ಮೇಲೆ ಹುಣ್ಣು ಎದ್ದಿದೆ. ಅದು ಯಾವ ಔಷಧಿಯಿಂದಲೂ ಗುಣವಾಗಲಿಲ್ಲ. ಆಗ ನಾರದರೇ ಶ್ರೀ ಕೃಷ್ಣನನ್ನು 'ಸ್ವಾಮಿ ನೀವೇ ಹೇಳಿರಿ, ನಿಮ್ಮ ಹುಣ್ಣು ಹೇಗೆ ಮಾಯವಾಗಬೇಕು?' ಎಂದು ಕೇಳುತ್ತಾರೆ. ಅದಕ್ಕೆ ಭಗವಂತನು ನಸುನಗುತ್ತಾ, "ಭಕ್ತರ ಪಾದಧೂಳಿಯಿಂದ ಮಾತ್ರ ನಿವಾರಣೆ ಆಗುತ್ತದೆ" ಎಂದನು. ನಾರದರು ಹೋಗಿ ಶ್ರೀಕೃಷ್ಣನ ಅಷ್ಟ ಮಹಿಷಿಯರಿಗೆ, "ಆ ಹುಣ್ಣು ಮಾಯವಾಗಬೇಕಾದರೆ ಭಕ್ತರ ಪಾದ ಧೂಳಿಬೇಕಂತೆ. ನಿಮ್ಮ ಪಾದ ಧೂಳಿ ಕೊಡಿರಿ" ಎಂದು ಕೇಳಿದರು. ಆಗ ಶ್ರೀ ಕೃಷ್ಣನ ಅಷ್ಟ ಮಹಿಷಿಯರು, "ಇಲ್ಲಪ್ಪ! ಸಾಧ್ಯವೇ ಇಲ್ಲ, ನಾರದ ಮುನಿಗಳೇ, ಅಂತಹ ಭಗವಂತನಿಗೆ ನಮ್ಮ ಪಾದ ಧೂಳಿಯೆ? ಅದು ಆಗದು" ಎಂದು ಹೇಳಿದರು. ನಾರದರು ಬಂದು," ಸ್ವಾಮಿ ತಮ್ಮ ಅಷ್ಟ ಮಹಿಷಿಯರನ್ನು ತಮ್ಮ ಪಾದದ ಧೂಳಿ ಕೊಡಿ ಎಂದು ಕೇಳಿದೆ. ಅದಕ್ಕವರು, ಆ ಭಗವಂತನ ತಲೆಯ ಹುಣ್ಣಿಗೆ ನಮ್ಮ ಪಾದ ಧೂಳಿಯೆ? ಅದಾಗದು", ಎಂದು ಖಡಾಖಂಡಿತವಾಗಿ ಹೇಳಿದರು," ಎಂದು ನಾರದರು ತಲೆಯಾಡಿಸಿದರು.

ಆಗ ಕೃಷ್ಣ ಮತ್ತೆ, "ಅಷ್ಟು ಕಷ್ಟ ಏಕೆ ನಾರದ ಮುನಿಗಳೇ. ನೇರವಾಗಿ ಹೋಗಿ ಗೋಕುಲದಲ್ಲಿನ ಗೋಪಿಯರಿಗೆ ನಿಮ್ಮ ಕೃಷ್ಣನಿಗೆ ಹಣೆಯ ಮೇಲೆ ಹುಣ್ಣಾಗಿದೆ, ನಿಮ್ಮ ಪಾದ ಧೂಳಿ ಕೊಡಿ ಎಂದು ಹೇಳಿ" ಎಂದನು. ನಾರದರು ನೇರವಾಗಿ ಗೋಕುಲಕ್ಕೆ ಹೋಗಿ ಗೋಪಿಯರಿಗೆ," ಶ್ರೀಕೃಷ್ಣನಿಗೆ ಹಣೆಯ ಮೇಲೆ ಹುಣ್ಣು ಆಗಿದೆ. ನಿಮ್ಮ ಪಾದ ಧೂಳಿಯಿಂದ ಗುಣವಾಗುತ್ತದೆಯಂತೆ" ಎಂದು ನಾರದರು ಮಾತು ಮುಗಿಸುವುದರೊಳಗಾಗಿ, ನದಿಯು ಸಾಗರವನ್ನು ಸೇರಲು ಅವಸರವಾಗಿ ಹೋದಂತೆ ಗೋಪಿಕೆಯರು ಓಡೋಡಿ ಬಂದು ತಮ್ಮ ಪಾದವನ್ನೇ ಶ್ರೀಕೃಷ್ಣನ ಹಣೆ ಮೇಲೆ ಇಟ್ಟು ತುಳಿದರು. ಭಕ್ತರಿಗೆ ಭಗವಂತನ ಪಾದವೂ ಒಂದೇ, ತಲೆಯೂ ಒಂದೇ. ಭಕ್ತಿಗೆ ಮೇಲು ಕೀಳಿಲ್ಲ, ಇತ್ತ ಕೃಷ್ಣ ಪರಮಾತ್ಮನ ಹುಣ್ಣು ಮಾಯವಾಗಿ ಹೋಯಿತು. ಇದು ಭಕ್ತರ ಪರೀಕ್ಷೆ.

## ಪುಸ್ತಕ ಪರಿಚಯ




ಪುಸ್ತಕದ ಹೆಸರು : ಶ್ರೀಗಂಧದ ಸಂಸಾರ
ಗಣಪತಿ ಪುಂಡಲೀಕ ಮಾಪ್ಸೇಕರರ ಆತ್ಮವೃತ್ತಾಂತ
ಲೇಖಕರು : ದಿವಾಕರ ಹೆಗಡೆ
ಪ್ರಕಾಶಕರು : ರಾಷ್ಟ್ರೋತ್ಥಾನ ಸಾಹಿತ್ಯ
ಬೆಲೆ : ₹ 100.00
ಪುಟಗಳು : xx + 112

ಬಾಲ್ಯದ ಬಡತನ, ವ್ಯಾಪಾರದ ಕಷ್ಟ–ನಷ್ಟಗಳು, ಕೌಟುಂಬಿಕ ನೋವು–ನಲಿವುಗಳು, ಪರಿವಾರದವರ ಒಲವು–ಅಸಹಕಾರಗಳು – ಇವೆಲ್ಲವುಗಳ ಮೂಲಕ ಹಾಯ್ದುಬಂದು, ಭಾರತದ ಅಂತಾರಾಷ್ಟ್ರೀಯ ಶ್ರೀಗಂಧದ ಮಾರುಕಟ್ಟೆಯನ್ನು 35 ವರ್ಷಗಳ ಕಾಲ ಆಳಿದವರು ಗಣಪತಿ ಪುಂಡಲೀಕ ಮಾಪ್ಸೇಕರ್. ತಾವು ದುಡಿದ 90% ಭಾಗವನ್ನು ದಾನಮಾಡಿ ಬದುಕಿದ ಮಾಪ್ಸೇಕರ್, ಎಲ್ಲಿಯೂ ಹೆಸರು ಹಾಕಲು ಅವಕಾಶ ಕೊಡದೇ, ಎಲ್ಲರಿಗಾಗಿ ನನ್ನ ಬದುಕು ಎಂಬ ತತ್ವವನ್ನಿಟ್ಟು ಬದುಕಿದವರು ಅವರು.

ಇಪ್ಪತ್ತೊಂದನೆಯ ಶತಮಾನದಲ್ಲಿ ನಿಂತು ನೋಡುವಾಗ, 'ನಿಜವಾಗಿಯೂ ಹೀಗೆ ಬದುಕಲು ಸಾಧ್ಯವೆ?' – ಎಂಬ ಪ್ರಶ್ನೆಯನ್ನೂ, ಬೆರಗನ್ನೂ ಏಕಕಾಲದಲ್ಲಿ ಹೊಮ್ಮಿಸುವಂಥ ಬದುಕೊಂದನ್ನು ನಮ್ಮೆದುರು ಯಾವುದೇ ಅಬ್ಬರವಿಲ್ಲದೆ, ಉದ್ವೇಗವಿಲ್ಲದೆ, ಹಳಹಳಿಕೆಯಿಲ್ಲದೆ ತೆರೆದಿಡುತ್ತದೆ – **'ಶ್ರೀಗಂಧದ ಸಂಸಾರ'**.

ಆನ್ ಲೈನ್ ಖರೀದಿಗಾಗಿ: **sahityabooks.com**

ಸಂಪಾದಕೀಯ ಸಹಕಾರ: ಶೈಲೇಶ್ ಕುಲಕರ್ಣಿ, ಶ್ರೀವತ್ಸ ಶೃಂಗೇರಿ, ತನ್ಮಯೀ ಪ್ರೇಮಕುಮಾರ್, ಸತ್ಯನಾರಾಯಣ ಶಾನಭಾಗ್, ರಾಧಾಕೃಷ್ಣ ಹೊಳ್ಳ, ಅನಿಲ್‌ಕುಮಾರ್ ಮೊಳಹಳ್ಳಿ

ಸೊಸೈಟಿ ಆಫ್ ಇಂಡಿಯನ್ ಡಿಫೆನ್ಸ್ ಮ್ಯಾನುಫ್ಯಾಕ್ಚರರ್ಸ್‌ನ ಕಾರ್ಯಕ್ರಮದಲ್ಲಿ ಮಾತನಾಡಿದ ರಾಜನಾಥ್ ಸಿಂಗ್, ಭಾರತದ ರಫ್ತುಗಳನ್ನು ಉತ್ತೇಜಿಸುವುದು ಸರ್ಕಾರದ ಪ್ರಮುಖ ಆದ್ಯತೆಯಾಗಿದೆ ಹಾಗೂ ಭಾರತವು ನಿವ್ವಳ ಆಮದುದಾರನಾಗುವ ಬದಲು ನಿವ್ವಳ ರಫ್ತುದಾರನಾಗಬೇಕೆಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದರು. ರಕ್ಷಣಾ ಸಚಿವಾಲಯವು 2021–22 ರಿಂದ 2025–26 ರವರೆಗೆ ಮುಂದಿನ ಐದು ವರ್ಷಗಳವರೆಗೆ 500 ಕೋಟಿ ರೂಪಾಯಿಗಳ ಬಜೆಟ್‌ನೊಂದಿಗೆ ಕೇಂದ್ರ ವಲಯದ ಯೋಜನೆಯನ್ನು ಅನುಮೋದಿಸಿದೆ. ಇದು 300 ಜನರ, ಸ್ಟಾರ್ಟ್–ಅಪ್‌ಗಳು, MSMEಗಳು ಮತ್ತು ವೈಯಕ್ತಿಕ ಇನ್ನೋವೇಟರ್ ಮತ್ತು 20 ಪಾಲುದಾರ ಇನ್ಕ್ಯುಬೇಟರ್‌ಗಳಿಗೆ ಆರ್ಥಿಕ ನೆರವು ನೀಡುತ್ತದೆ ಎಂದಿದ್ದಾರೆ.

ಜಮ್ಮು ಮತ್ತು ಕಾಶ್ಮೀರದಲ್ಲಿ 2022ರ ವೇಳೆಗೆ ಜಲ ಜೀವನ್ ಮಿಷನ್ ಅಡಿಯಲ್ಲಿ ಶೇ.100 ರಷ್ಟು ಗ್ರಾಮೀಣ ಕುಟುಂಬಗಳಿಗೆ ನಲ್ಲಿ ನೀರಿನ ಸಂಪರ್ಕ ನೀಡುವ ಗುರಿಯನ್ನು ಹೊಂದಲಾಗಿದ್ದು, ಈ ಪ್ರಯತ್ನದಡಿ ಕೇಂದ್ರಾಡಳಿತವು ಎರಡು ವರ್ಷಗಳಲ್ಲಿ 4.62 ಲಕ್ಷ ನಲ್ಲಿ ನೀರಿನ ಸಂಪರ್ಕಗಳನ್ನು ಒದಗಿಸಿದೆ. ಇಲ್ಲಿಯವರೆಗೆ ಜಮ್ಮು ಮತ್ತು ಕಾಶ್ಮೀರದ 10.37 ಲಕ್ಷ (56.51%) ಕುಟುಂಬಗಳು ನಲ್ಲಿ ನೀರಿನ ಸಂಪರ್ಕವನ್ನು ಹೊಂದಿವೆ ಮತ್ತು 2020–21 ರಲ್ಲಿ 2.22 ಲಕ್ಷ ನಲ್ಲಿ ನೀರಿನ ಸಂಪರ್ಕಗಳನ್ನು ಒದಗಿಸಲಾಗಿದೆ. ಜಮ್ಮು ಮತ್ತು ಕಾಶ್ಮೀರದ ಜಲ ಜೀವನ್ ಮಿಷನ್ ಅಡಿಯಲ್ಲಿನ ಕೊನೆಯ ಹಂತದಲ್ಲಿ, 121 ಬ್ಲಾಕ್‌ಗಳು, 1,660 ಪಂಚಾಯತ್ ಮತ್ತು 2,623 ಹಳ್ಳಿಗಳನ್ನು ಒಳಗೊಂಡಿರುವ ಏಳು ಜಿಲ್ಲೆಗಳು 3.12 ಲಕ್ಷ ನಲ್ಲಿ ನೀರಿನ ಸಂಪರ್ಕ ಒದಗಿಸುವ ಪ್ರಯತ್ನ ನಡೆಸಲಾಗುತ್ತದೆ ಎಂದು ಸರ್ಕಾರ ತಿಳಿಸಿದೆ.

2017–18 ರಿಂದ 2021–22ರ ಅಕ್ಟೋಬರ್‌ವರೆಗೆ ರಾಷ್ಟ್ರೀಯ ಹೆದ್ದಾರಿಗಳ ಉದ್ದಕ್ಕೂ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (NHAI) ನೆಟ್ಟಿರುವ ಒಟ್ಟು ಮರಗಳ ಸಂಖ್ಯೆ 2.23 ಕೋಟಿ ಎಂದು ಕೇಂದ್ರ ಸರ್ಕಾರ ಮಾಹಿತಿ ನೀಡಿದೆ. ಅಲ್ಲದೆ, ಈ ಕುರಿತಂತೆ 94 ಯೋಜನೆಗಳಲ್ಲಿ 55.1 ಲಕ್ಷ ಗಿಡಗಳನ್ನು ನೆಡಲಾಗಿದೆ ಎಂದು ಸಹ ತಿಳಿಸಿದೆ.



ಭಾರತೀಯ ನೌಕಾಪಡೆಯು ತನ್ನ ಬತ್ತಳಿಕೆಗೆ ಹೊಚ್ಚ ಹೊಸ ಜಲಾಂತರ್ಗಾಮಿ ನೌಕೆ ಐ.ಎನ್.ಎಸ್. ವೇಲಾ ಅನ್ನು ಸೇರ್ಪಡೆಗೊಳಿಸಿದೆ. ಫ್ರೆಂಚ್ ವಿನ್ಯಾಸದ ಸ್ಕಾರ್ಪಿಯನ್ ವರ್ಗದ ಈ ಜಲಾಂತರ್ಗಾಮಿ ನೌಕೆಯನ್ನು ಸರ್ಕಾರಿ ಸ್ವಾಮ್ಯದ ಮಾಡಗಾಂವ್ ಡಾಕ್ ಬಿಲ್ಡರ್ಸ್ ಲಿಮಿಟೆಡ್ (ಎಂಎಲ್‌ಡಿ) ನಿರ್ಮಿಸಿದೆ. "ಜಾಗೃತ, ಶೌರ್ಯ, ವಿಜಯಶಾಲಿ' ಎಂಬ ಧ್ಯೇಯವಾಕ್ಯದ ನಿಗದಿತ ಕಾರ್ಯಗಳನ್ನು ಸಾಧಿಸುವಲ್ಲಿ ಜಲಾಂತರ್ಗಾಮಿಯು ಚೈತನ್ಯವನ್ನು ತುಂಬಿಸಲಿದೆ. ಈ ಧ್ಯೇಯವಾಕ್ಯದಲ್ಲಿರುವಂತೆ ಅತ್ಯಂತ ಸನ್ನದ್ಧವಾಗಿಯೂ, ಎಲ್ಲಾ ಸವಾಲುಗಳನ್ನು ಜಯಿಸಲು ಯಾವಾಗಲೂ ಸಿದ್ಧವಾಗಿದೆಯೆಂದೂ ಮತ್ತು ಪ್ರತಿ ಬಾರಿಯೂ ವಿಜಯಶಾಲಿಯಾಗಿ ಹೊರಹೊಮ್ಮುತ್ತದೆ ಎಂಬ ಸಂದೇಶವನ್ನು ರವಾನಿಸುತ್ತದೆ.

ನವೀಕರಿಸಬಹುದಾದ ಇಂಧನ ಮೂಲವಾದ ಸೌರ ವಿದ್ಯುತ್ ಮೂಲಕ ರೈತರ ಪಂಪ್‌ಸೆಟ್‌ಗಳಿಗೆ ನಿರಂತರ ವಿದ್ಯುತ್ ಒದಗಿಸಲು ರಾಜ್ಯದ ಇಂಧನ ಇಲಾಖೆ ಕುಸುಮ್ ಯೋಜನೆಯನ್ನು ಜಾರಿಗೆ ತರಲು ನಿರ್ಧರಿಸಿದೆ. ರಾಜ್ಯದಲ್ಲಿ ಥ್ರೀ ಫೇಸ್ ವಿದ್ಯುತ್ ಗಾಗಿ ಭಾರಿ ಬೇಡಿಕೆ ಇದೆ. ಆದರೆ ಸಾಂಪ್ರದಾಯಿಕ ವಿದ್ಯುತ್ ಮೂಲಗಳಿಂದ ವಿದ್ಯುತ್ ಉತ್ಪಾದನೆ ಆಗದ ಕಾರಣ ರೈತರಿಗೆ ಕನಿಷ್ಠ ಏಳು ಗಂಟೆ ವಿದ್ಯುತ್ ನೀಡಲೂ ಸಾಧ್ಯವಾಗುತ್ತಿಲ್ಲ. ಇದನ್ನು ಮನಗಂಡು ಕುಸುಮ್ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ. ಈ ಬಗ್ಗೆ ಮಾಹಿತಿಯನ್ನು

## ಸಾಲುದ್ದದ ಸುದ್ದಿಗಳು

ನೀಡಿರುವ ಇಂಧನ ಸಚಿವ ಸುನಿಲ್ ಕುಮಾರ್ ಅವರು, ಗ್ರಾಮ ಮಟ್ಟದಲ್ಲಿ 5–10 ಮೆಗಾ ವ್ಯಾಟ್ ಸೌರ ವಿದ್ಯುತ್ ಉತ್ಪಾದನೆಯನ್ನು ಮಾಡಿ ಅದನ್ನು ನೇರವಾಗಿ ರೈತರಿಗೆ ತಲುಪಿಸಲಾಗುವುದು ಎಂದಿದ್ದಾರೆ.




ಸಾಮಾನ್ಯ ಜನರು ಮತ್ತು ದಾವೆದಾರರಿಗೆ ವಿಶೇಷವಾಗಿ ಗ್ರಾಮೀಣ ಪ್ರದೇಶದ ಜನರಿಗೆ ಸಹಾಯ ಮಾಡಲು ಕೇಂದ್ರ ಸರಕಾರವು 'ನ್ಯಾಯ ಮನೆ ಬಾಗಿಲಿಗೆ' ಎಂಬ ಪರಿಕಲ್ಪನೆಯೊಂದಿಗೆ ಸಂಚಾರಿ ನ್ಯಾಯಾಲಯಗಳು, ಲೋಕ ಅದಾಲತ್‌ಗಳ ಸ್ಥಾಪನೆ ಹಾಗೂ ಸ್ಥಳದಲ್ಲೇ ಪ್ರಕರಣಗಳ ವಿಚಾರಣೆ ನಡೆಸುವ ಮೂಲಕ ಮಹತ್ವದ ಕ್ರಮಗಳನ್ನು ಕೈಗೊಳ್ಳುತ್ತಿದ್ದೇವೆ ಎಂದು ಲೋಕಸಭೆಯಲ್ಲಿ ಕೇಂದ್ರ ಕಾನೂನು ಸಚಿವ ಕಿರಣ್ ರಿಜ್ಜು ತಿಳಿಸಿದರು.

ಸಿಬ್ಬಂದಿ, ಸಾರ್ವಜನಿಕ ಕುಂದುಕೊರತೆಗಳು ಮತ್ತು ಪಿಂಚಣಿಗಳ ರಾಜ್ಯ ಸಚಿವ ಜಿತೇಂದ್ರ ಸಿಂಗ್, 2024 ರ ವೇಳೆಗೆ ಒಂಬತ್ತು ಪರಮಾಣು ರಿಯಾಕ್ಟರ್‌ಗಳನ್ನು ಸ್ಥಾಪಿಸಲಾಗುವುದು ಮತ್ತು ಕೋವಿಡ್ ಸಮಯದಲ್ಲಿ ಅನುಮೋದಿಸಲಾದ 9,000 ಮೆಗಾವ್ಯಾಟ್ ಸಾಮರ್ಥ್ಯದ 12 ರಿಯಾಕ್ಟರ್‌ಗಳು ಕಾರ್ಯ ರೂಪಕ್ಕೆ ಬರಲಿವೆ. ದೇಶದ ವಿವಿಧ ಭಾಗಗಳಲ್ಲಿ ಐದು ಹೊಸ ಜಾಗಗಳನ್ನು ಸಹ ಗುರುತಿಸಲಾಗುತ್ತಿದೆ ಎಂದು ಸಂಸತ್ ಅಧಿವೇಶನದಲ್ಲಿ ತಿಳಿಸಿದ್ದಾರೆ.

ಭಾರತ ಏಷ್ಯಾದ 4ನೇ ಅತ್ಯಂತ ಶಕ್ತಿಶಾಲಿ ರಾಷ್ಟ್ರವಾಗಿ ಹೊರಹೊಮ್ಮಿದೆ. ಸಿಡ್ನಿ ಮೂಲದ ಲೋವಿ ಇನ್ಸ್ಟಿಟ್ಯೂಟ್ 2021 ರ ಏಷ್ಯಾ ಪವರ್ ಇಂಡೆಕ್ಸ್‌ನಲ್ಲಿ 26 ಶಕ್ತಿಶಾಲಿ ದೇಶಗಳ ಪಟ್ಟಿಯನ್ನು ಪ್ರಕಟಿಸಿದ್ದು, ಅಮೆರಿಕ ಈ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದ್ದರೆ, ಚೀನಾ ಎರಡನೇ ಸ್ಥಾನ ಪಡೆದುಕೊಂಡಿದೆ. ಬಳಿಕ ಜಪಾನ್, ಭಾರತ, ರಷ್ಯಾ, ಆಸ್ಟ್ರೇಲಿಯಾ, ದಕ್ಷಿಣ ಕೊರಿಯಾ, ಸಿಂಗಪುರ್, ಇಂಡೋನೇಷ್ಯಾ ಮತ್ತು ಥೈಲ್ಯಾಂಡ್ ಸ್ಥಾನ ಪಡೆದುಕೊಂಡಿವೆ.

ವರದಿಯು ಭಾರತವನ್ನು ಏಷ್ಯಾದ ಮಲ್ಟಿಪೋಲಾರ್ ಶಕ್ತಿ ಎಂದು ಹೇಳಿದೆ. ದೇಶದ ಸಂಪನ್ಮೂಲ ಮತ್ತು ಪ್ರಭಾವದ ಆಧಾರದ ಮೇಲೆ ಈ ಶ್ರೇಯಾಂಕವನ್ನು ನೀಡಲಾಗಿದೆ. ಭವಿಷ್ಯದ ಸಂಪನ್ಮೂಲ ಮಾಪನದಲ್ಲಿ ಭಾರತವನ್ನು ಅತ್ಯುತ್ತಮ ಪ್ರದರ್ಶನ ನೀಡುವುದರಲ್ಲಿ ಒಂದಾಗಿದೆ ಎಂದು ಪರಿಗಣಿಸಿದೆ.

ರಕ್ಷಣಾ ವಲಯದಲ್ಲಿ ಭಾರತಕ್ಕೆ ಏಳನೇ ಸ್ಥಾನವಿದ್ದರೆ, ಆರ್ಥಿಕ ಪ್ರಗತಿಯಲ್ಲಿ ದೇಶ 8ನೇ ಸ್ಥಾನಕ್ಕೆ ಕುಸಿದಿದೆ. 2021ರಲ್ಲಿ ಭಾರತ ತನ್ನ ಸ್ಥಿತಿಸ್ಥಾಪಕತ್ವ ಮತ್ತು ಸೇನಾ ಸಾಮರ್ಥ್ಯವನ್ನು ಹೆಚ್ಚಿಸಿಕೊಂಡಿದೆ. ಆದರೂ, ಕೊರೊನಾ ವೈರಸ್ ದಾಳಿಗೂ ಮುನ್ನದ ಬೆಳವಣಿಗೆಗೆ ಹೋಲಿಸಿದರೆ ಇದು ಕಡಿಮೆಯೇ ಎಂದು ವರದಿ ಉಲ್ಲೇಖಿಸಿದೆ.

ವಿಮಾನ ನಿಲ್ದಾಣ ಪ್ರಾಧಿಕಾರ ಮುಂದಿನ ಐದು ವರ್ಷಗಳಲ್ಲಿ ಸುಮಾರು 25 ಸಾವಿರ ಕೋಟಿ ರೂಪಾಯಿಗಳನ್ನು ವಿಮಾನ ನಿಲ್ದಾಣಗಳ ಅಭಿವೃದ್ಧಿಗಾಗಿ ವ್ಯಹಿಸಲಾಗುತ್ತದೆ ಎಂದು ತಿಳಿಸಿದೆ.ಅಸ್ತಿತ್ವದಲ್ಲಿರುವ ಟರ್ಮಿನಲ್ಗಳ ವಿಸ್ತರಣೆ ಮತ್ತು ಮಾರ್ಪಾಡು, ಹೊಸ ಟರ್ಮಿನಲ್ಗಳ ನಿರ್ಮಾಣ, ಅಸ್ತಿತ್ವದಲ್ಲಿರುವ ರನ್ವೇಗಳನ್ನು ಬಲಪಡಿಸುವುದು, ಏರ್ಪೋರ್ಟ್ ನ್ಯಾವಿಗೇಷನ್ ಸೇವೆಗಳು, ಕಂಟ್ರೋಲ್ ಟವರ್ಗಳಿಗೆ ಈ ಹಣವನ್ನು ಖರ್ಚು ಮಾಡಲಾಗುತ್ತದೆ.

ಸಾರ್ವಜನಿಕ ಖಾಸಗಿ ಸಹಭಾಗಿತ್ವದ ಅಡಿಯಲ್ಲಿ ದೇಶಾದ್ಯಂತ ಹೊಸ ಗ್ರೀನ್ಫೀಲ್ಡ್ ವಿಮಾನ ನಿಲ್ದಾಣಗಳ ಅಭಿವೃದ್ಧಿಗೆ 36 ಸಾವಿರ ಕೋಟಿ ರೂಪಾಯಿ ಹೂಡಿಕೆ ಮಾಡಲು ಯೋಜಿಸಲಾಗಿದೆ ಎಂದು ನಾಗರಿಕ ವಿಮಾನಯಾನ ಖಾತೆ ರಾಜ್ಯ ಸಚಿವ ವಿ.ಕೆ. ಸಿಂಗ್ ಹೇಳಿದ್ದಾರೆ.

ದೆಹಲಿ, ಹೈದರಾಬಾದ್ ಮತ್ತು ಬೆಂಗಳೂರಿನಲ್ಲಿರುವ ಮೂರು ಪಿಪಿಪಿ ವಿಮಾನ ನಿಲ್ದಾಣಗಳು 30 ಸಾವಿರ ಕೋಟಿ ರೂಪಾಯಿಗಳ ದೊಡ್ಡ ವಿಸ್ತರಣೆ ಯೋಜನೆಯನ್ನು ಕೈಗೆತ್ತಿಕೊಂಡಿವೆ ಮತ್ತು ದೇಶಾದ್ಯಂತ 21 ಗ್ರೀನ್ಫೀಲ್ಡ್ ವಿಮಾನ ನಿಲ್ದಾಣಗಳನ್ನು ಸ್ಥಾಪಿಸಲು ಸರ್ಕಾರವು ಅನುಮೋದನೆ ನೀಡಿದೆ ಎಂದಿದ್ದಾರೆ.

ಹೆಣ್ಣು ಮಕ್ಕಳ ಭವಿಷ್ಯಕ್ಕಾಗಿ ಉಳಿತಾಯ ಮಾಡುವಂತೆ ಪೋಷಕರನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರಕಾರ ಸುಕನ್ಯಾ ಸಮೃದ್ಧಿ ಯೋಜನೆಯನ್ನು ಜಾರಿಗೊಳಿಸಿದೆ. ಈ ಯೋಜನೆಯಡಿಯಲ್ಲಿ ಏಪ್ರಿಲ್ 1, 2018 ರಿಂದ 1.43 ಕೋಟಿ ಖಾತೆಗಳನ್ನು ತೆರೆಯಲಾಗಿದೆ ಎಂದು ಸರ್ಕಾರ ಮಾಹಿತಿ ನೀಡಿದೆ. ಏಪ್ರಿಲ್ 1, 2018 ರಿಂದ ಎರಡು ವರ್ಷ ಏಳು ತಿಂಗಳ ಅವಧಿಯಲ್ಲಿ ದೇಶದಲ್ಲಿ ಸುಮಾರು 1.43 ಕೋಟಿ ಸುಕನ್ಯಾ ಸಮೃದ್ಧಿ ಖಾತೆಗಳನ್ನು ತೆರೆಯಲಾಗಿದೆ ಎಂದು ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ಹೇಳಿದ್ದಾರೆ.




ಉತ್ತರ ಪ್ರದೇಶವು ಖಾತೆ ತೆರೆಯುವಿಕೆಯಲ್ಲಿ ಅಗ್ರಸ್ಥಾನದಲ್ಲಿದ್ದು. ನಂತರದ ಸ್ಥಾನದಲ್ಲಿ ತಮಿಳುನಾಡು ಮತ್ತು ಮಹಾರಾಷ್ಟ್ರ ಇದೆ. ಆನಂತರದಲ್ಲಿ ಮಧ್ಯಪ್ರದೇಶ ಮತ್ತು ಕರ್ನಾಟಕ ಮುಂದಿನ ಎರಡು ಸ್ಥಾನಗಳನ್ನು ಪಡೆದುಕೊಂಡಿವೆ.

ಸುಕನ್ಯಾ ಸಮೃದ್ಧಿ ಯೋಜನೆ ಯೋಜನೆಯನ್ನು 2015 ರಲ್ಲಿ, ಭಾರತದ ಪ್ರಧಾನಿ ನರೇಂದ್ರ ಮೋದಿ ಅವರು 'ಬೇಟಿ ಬಚಾವೊ, ಬೇಟಿ ಪದಾವೊ' ಅಭಿಯಾನದಡಿ ಪ್ರಾರಂಭಿಸಿದರು. ಇದು ಒಂದು ಸಣ್ಣ ಠೇವಣಿ ಯೋಜನೆಯಾಗಿದ್ದು, ಹೆಣ್ಣು ಮಗುವಿನ ಶಿಕ್ಷಣ ಮತ್ತು ವಿವಾಹ ವೆಚ್ಚಗಳನ್ನು ಪೂರೈಸುತ್ತದೆ.

ದೇಶ–ವಿದೇಶದಲ್ಲಿ ಜನಮನ್ನಣೆ ಗಳಿಸಿರುವ ಮೈಸೂರು ಸಿಲ್ಕ್ ಸೀರೆ ಹೆಚ್ಚಿನ ಗ್ರಾಹಕರಿಗೆ ತಲುಪುವ ಉದ್ದೇಶದಿಂದ ರೇಷ್ಮೆ ಸೀರೆ ಉತ್ಪಾದನೆ ಹೆಚ್ಚಿಸಲು ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಚಿವ ಡಾ. ನಾರಾಯಣಗೌಡ ಅವರು ಮತ್ತೊಂದು ಮಹತ್ವದ ಹೆಜ್ಜೆ ಇಟ್ಟಿದ್ದಾರೆ. ಮೈಸೂರು ಸಿಲ್ಕ್ ಸೀರೆಗಳಿಗೆ ಬೇಡಿಕೆಯೂ ಹೆಚ್ಚುತ್ತಿದ್ದು, ಉತ್ಪಾದನೆ ಹೆಚ್ಚಿಸಲು ಸರ್ಕಾರ ಕ್ರಮ ಕೈಗೊಂಡಿದೆ. ಹಾಗಾಗಿ, ಸಚಿವ ಡಾ. ನಾರಾಯಣಗೌಡ ಅವರ ಸೂಚನೆಯಂತೆ ಕೆಎಸ್‌ಐಸಿಗೆ ಮತ್ತೆ 192 ವಿದ್ಯುತ್ ಕೈಮಗ್ಗಗಳನ್ನು ನೀಡಲಾಗಿದೆ. ಇದರಿಂದ ರೇಷ್ಮೆ ಸೀರೆ ಉತ್ಪಾದನೆಯಲ್ಲಿ ಬರೋಬ್ಬರಿ 50% ಹೆಚ್ಚಳವಾಗಲಿದೆ. ಪ್ರಸ್ತುತ 249 ವಿದ್ಯುತ್ ಕೈಮಗ್ಗಗಳಿವೆ. 249 ಕೈಮಗ್ಗಗಳಿಂದ ಪ್ರತಿ ತಿಂಗಳು ಸಮಾರು 70 ಸಾವಿರ ಮೀಟರ್ ರೇಷ್ಮೆ ಉತ್ಪಾದನೆ ಮಾಡಲಾಗುತ್ತಿದೆ. ರೇಷ್ಮೆ ಕೇಂದ್ರದಲ್ಲಿ ಉಪಯೋಗಿಸದೆ ಹಾಳಾಗಿದ್ದ 192 ಕೈಮಗ್ಗಗಳನ್ನು ದುರಸ್ತಿಗೊಳಿಸಿ ಮೈಸೂರು ಹಾಗೂ ಚನ್ನಪಟ್ಟಣದ ನೇಯ್ಗೆ ಘಟಕಗಳಿಗೆ ಹಂಚಿಕೆ ಮಾಡಲಾಗುತ್ತಿದೆ. 192 ಮಗ್ಗಗಳನ್ನು ಹೆಚ್ಚುವರಿಯಾಗಿ ನೀಡುವುದರಿಂದ ರೇಷ್ಮೆ ಸೀರೆ ಉತ್ಪಾದನೆಯಲ್ಲಿ 50% ಹೆಚ್ಚಳವಾಗಲಿದೆ. ಪ್ರತಿ ತಿಂಗಳು 1 ಲಕ್ಷ ಮೀಟರ್ಗಿಂತಲೂ ಹೆಚ್ಚು ರೇಷ್ಮೆ ಸೀರೆ ಉತ್ಪಾದನೆಯಾಗಲಿದೆ.

ಬೇಡಿಕೆಗೆ ಅನುಗುಣವಾಗಿ ಉತ್ಪಾದನೆ ಹೆಚ್ಚಿಸಲು ಕೆಎಸ್‌ಐಸಿಗೆ ಈಗಿರುವ 249 ಮಗ್ಗಗಳ ಜೊತೆಗೆ 192 ಮಗ್ಗಗಳನ್ನು ನೀಡಲಾಗುತ್ತಿದೆ. ಇದರಿಂದ ಸೀರೆಗಳ ಉತ್ಪಾದನೆಯೂ ಹೆಚ್ಚಾಗಲಿದ್ದು, ರೈತರ ರೇಷ್ಮೆಗೂಡಿಗೂ ಬೇಡಿಕೆ ಹೆಚ್ಚಾಗಲಿದೆ. ರೈತರ ಹಿತ ಕಾಯುವುದರ ಜೊತೆಗೆ ಸಂಸ್ಥೆಗೆ ಶಕ್ತಿ ತುಂಬಲು ಇದು ಅನುಕೂಲವಾಗಲಿದೆ ಎಂದು ಸಚಿವ ಡಾ.ನಾರಾಯಣಗೌಡ ಅವರು ತಿಳಿಸಿದ್ದಾರೆ.

Date of Publication 10 DECEMBER 2021 Permitted to post on 13-12-2021

REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2021-2023 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2021-23

FORTNIGHTLY 15-12-2021

पुंगव PUNGAVA

# 74, Ranga Rao Road, Shankarapuram,
Bangalore - 560 004. Ph: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00



## ಆಗ್ರಾದ ಮೊಘಲ್ ರಸ್ತೆಗೆ ಮಹಾರಾಜ ಅಗ್ರಸೇನ್ ರಸ್ತೆ ಎಂದು ಮರುನಾಮಕರಣ



ಆಗ್ರಾದ ಮೊಘಲ್ ರಸ್ತೆಯನ್ನು ಗುರುವಾರ ಮಹಾರಾಜ ಅಗ್ರಸೇನ್ ಮಾರ್ಗ ಎಂದು ಮರುನಾಮಕರಣ ಮಾಡಲಾಗಿದೆ. ಈ ಸಂದರ್ಭದಲ್ಲಿ ಮಾತನಾಡಿದ ಆಗ್ರಾ ಮೇಯರ್ ನವೀನ್ ಜೈನ್, "ಮುಂಬರುವ ಪೀಳಿಗೆಯು ಪ್ರಮುಖ ವ್ಯಕ್ತಿಗಳಿಂದ ಪ್ರೇರಣೆ ಪಡೆಯಬೇಕು" ಎಂದು ಹೇಳಿದ್ದಾರೆ. "ಹಿಂದೆ, ಸುಲ್ತಾನ್ ಗಂಜ್ ಪುಲಿಯಾಗೆ ದಿವಂಗತ ಸತ್ಯ ಪ್ರಕಾಶ್ ವಿಕಲ್ ಅವರ ಹೆಸರನ್ನು ಇಡಲಾಗಿತ್ತು. ಆಗ್ರಾದ ಫಾಟಿಯಾ ಅಜಮ್ ಖಾನ್ ರಸ್ತೆಗೆ ದಿವಂಗತ ವಿಶ್ವ ಹಿಂದೂ ಪರಿಷತ್ ನಾಯಕ ಅಶೋಕ್ ಸಿಂಘಾಲ್ ಅವರ ಹೆಸರನ್ನು ಇಟ್ಟಿದ್ದೇವೆ ಎಂದು ಅವರು ಹೇಳಿದ್ದಾರೆ. ಮಾತ್ರವಲ್ಲದೇ ರಾಜ್ಯದ ಎರಡು ಕಡೆಗಳಲ್ಲಿ ಮಹಾನ್ ವ್ಯಕ್ತಿಗಳ ಮೂರ್ತಿಗಳನ್ನು ಸ್ಥಾಪಿಸಲಾಗುವುದು ಎಂದು ಜೈನ್ ಘೋಷಿಸಿದ್ದಾರೆ.

## ಐಎಂಎಫ್ ನ ಪ್ರಥಮ ಉಪ ವ್ಯವಸ್ಥಾಪಕ ನಿರ್ದೇಶಕಿಯಾಗಿ ಬಡ್ತಿ ಪಡೆದ ಗೀತಾ ಗೋಪಿನಾಥನ್




ಅಂತಾರಾಷ್ಟ್ರೀಯ ಹಣಕಾಸು ನಿಧಿಯ (ಐಎಂಎಫ್) ಮುಖ್ಯ ಅರ್ಥಶಾಸ್ತ್ರಜ್ಞೆಯಾಗಿರುವ ಮೈಸೂರು ಮೂಲದ ಗೀತಾ ಗೋಪಿನಾಥ್ ಅವರು ಐಎಂಎಫ್‌ನ ಪ್ರಥಮ ಉಪ ವ್ಯವಸ್ಥಾಪಕ ನಿರ್ದೇಶಕಿಯಾಗಿ ಬಡ್ತಿ ಪಡೆದುಕೊಂಡಿದ್ದಾರೆ. ಜೆಫ್ರಿ ಒಕಾಮೊಟೊ ಅವರು ತೊರೆಯಲಿರುವ ಪ್ರಥಮ ಉಪ ವ್ಯವಸ್ಥಾಪಕ ನಿರ್ದೇಶಕ ಹುದ್ದೆಗೆ ಗೀತಾ ಗೋಪಿನಾಥನ್ ಅವರ ನೇಮಕವಾಗಿದೆ. ಈಗಾಗಲೇ ಮೂರು ವರ್ಷ ಐಎಂಎಫ್ನ ಮುಖ್ಯ ಅರ್ಥಶಾಸ್ತ್ರಜ್ಞರಾಗಿ ಸೇವೆ ಸಲ್ಲಿಸಿರುವ ಗೀತಾ ಗೋಪಿನಾಥನ್ ಅವರು ಮುಂದಿನ ವರ್ಷದ ಆರಂಭದಲ್ಲಿ ಅಧಿಕಾರ ವಹಿಸಿಕೊಳ್ಳಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಅಂತಾರಾಷ್ಟ್ರೀಯ ಹಣಕಾಸು ನಿಧಿಯ ಇತಿಹಾಸದಲ್ಲಿ ಮೊದಲ ಮಹಿಳಾ ಅರ್ಥಶಾಸ್ತ್ರಜ್ಞರಾಗಿರುವ ಗೀತಾ ಗೋಪಿನಾಥ್ ಅವರು ಐ ಎಂ ಎಫ್ ನ ಸದಸ್ಯ ರಾಷ್ಟ್ರಗಳಿಂದ ಮೆಚ್ಚುಗೆಯನ್ನು ಗಳಿಸಿದ್ದಾರೆ ಮತ್ತು ಕಠಿಣವಾದ ಕೆಲಸವನ್ನು ಮುನ್ನಡೆಸಿ, ಯಶಸ್ವಿಗೊಳಿಸುವ ಸಾಮರ್ಥ್ಯ ಅವರಲ್ಲಿದೆ ಎಂದು ಅಂತಾರಾಷ್ಟ್ರೀಯ ಹಣಕಾಸು ನಿಧಿಯ ವ್ಯವಸ್ಥಾಪಕ ನಿರ್ದೇಶಕಿ ಕ್ರಿಸ್ಟಲಿನಾ ಜಾರ್ಜಿವಾ ಅವರು ಹೇಳಿದ್ದಾರೆ.

## ಮಾನವ ಗಗನಯಾನಕ್ಕಾಗಿ 6 ದೇಶಗಳೊಂದಿಗೆ ಕೆಲಸ ಮಾಡುತ್ತಿರುವ ಭಾರತ

ಲುಪೆಕ್ಸ್ ಮಿಷನ್‌ನಲ್ಲಿ ಚಂದ್ರನನ್ನು ಭಾರತೀಯ ಚಂದ್ರನ ಲ್ಯಾಂಡರ್, ಜಪಾನೀಸ್ ರೋವರ್ ಜಂಟಿಯಾಗಿ ಅನ್ವೇಷಿಸಲಿದೆ. ಜಾಕ್ಸಾ (ಜಪಾನ್ ಏರೋಸ್ಪೇಸ್ ಎಕ್ಸ್‌ಪ್ಲೋರೇಶನ್ ಏಜೆನ್ಸಿ) ಅಧಿಕಾರಿ ಸುದ್ದಿಗೋಷ್ಠಿಯಲ್ಲಿ ಹೇಳಿದ್ದಾರೆ. ಇದು ಭಾರತ ಮತ್ತು ಜಪಾನಿನ ಬಾಹ್ಯಾಕಾಶ ಸಂಸ್ಥೆಗಳು ಚಂದ್ರನ ಧ್ರುವ ಪ್ರದೇಶವನ್ನು ಅನ್ವೇಷಿಸಲು ಉದ್ದೇಶಿಸಿರುವ ಜಂಟಿ ಕಾರ್ಯಾಚರಣೆಯಾಗಲಿದೆ ಎಂದು ಡಾ. ಯಮಕಾವಾ ತಿಳಿಸಿದ್ದಾರೆ. ಲೂನಾರ್ ಪೋಲಾರ್ ಎಕ್ಸ್‌ಪ್ಲೋರೇಶನ್ ಮಿಷನ್ (ಲುಪೆಕ್ಸ್) ಎಂದು ಕರೆಯಲ್ಪಡುವ ಈ ಮಿಷನ್ ಭಾರತೀಯ ಚಂದ್ರನ ಲ್ಯಾಂಡರ್ ಮತ್ತು ಜಪಾನೀಸ್ ರೋವರ್ ಅನ್ನು ಹೊಂದಿರುತ್ತದೆ.

## ದೇಶದ 70,000 ಪೆಟ್ರೋಲ್ ಪಂಪ್‌ಗಳಲ್ಲಿ 22,000 ಇ-ಚಾರ್ಜಿಂಗ್ ಸ್ಟೇಷನ್ ಸ್ಥಾಪನೆಯ ಗುರಿ




ಭಾರತದಲ್ಲಿ ಎಲೆಕ್ಟ್ರಿಕ್ ವಾಹನಗಳ ಚಾರ್ಜಿಂಗ್ ಮೂಲಸೌಕರ್ಯ ಅಭಿವೃದ್ಧಿಪಡಿಸಲು ಕೇಂದ್ರ ಸರ್ಕಾರ ದೊಡ್ಡ ಉತ್ತೇಜನವನ್ನು ನೀಡುತ್ತಿದ್ದು, ದೇಶದ 70,000 ಪೆಟ್ರೋಲ್ ಪಂಪ್‌ಗಳಲ್ಲಿ 22,000 ಇ-ಚಾರ್ಜಿಂಗ್ ಸ್ಟೇಷನ್‌ಗಳನ್ನು ಸ್ಥಾಪಿಸಲಾಗುವುದು ಎಂದು ಕೇಂದ್ರ ಬೃಹತ್ ಕೈಗಾರಿಕೆಗಳ ಸಚಿವ ಮಹೇಂದ್ರನಾಥ್ ಪಾಂಡೆ ರಾಜ್ಯಸಭೆಗೆ ತಿಳಿಸಿದ್ದಾರೆ. ಎಕ್ಸ್‌ಪ್ರೆಸ್ ಹೆದ್ದಾರಿಗಳು, ಹೆದ್ದಾರಿಗಳು ಮತ್ತು ಜನನಿಬಿಡ ನಗರಗಳಲ್ಲಿ ಎಲೆಕ್ಟ್ರಿಕ್ ವಾಹನಗಳಿಗಾಗಿ ಇಂತಹ ಚಾರ್ಜಿಂಗ್ ಸ್ಟೇಷನ್ ಗಳನ್ನು ಸ್ಥಾಪಿಸಲು ಸರ್ಕಾರ ಆದ್ಯತೆ ನೀಡುತ್ತಿದೆ ಎಂದು ಅವರು ತಿಳಿಸಿದ್ದಾರೆ. ಭಾರತದಲ್ಲಿ ವಿದ್ಯುತ್ವಾಹನಗಳನ್ನು ವೇಗವಾಗಿ ಅಳವಡಿಸಿಕೊಳ್ಳುವ ಮತ್ತು ತಯಾರಿಸುವ ದೃಷ್ಟಿಯಿಂದ (ಫೇಮ್-ಇಂಡಿಯಾ II) ಯೋಜನೆಯಡಿ ಸರ್ಕಾರವು ಆಟೋಮೋಟಿವ್ ರೀಸರ್ಚ್ ಅಸೋಸಿಯೇಷನ್ ಆಫ್ ಇಂಡಿಯಾ (ಎಆರ್ಎಐ)ಗೆ ನಿರ್ದೇಶನ ನೀಡಿದೆ ಎಂದು ಹೇಳಿದರು. ಮುಂದಿನ ವರ್ಷದ ಡಿಸೆಂಬರ್ ವೇಳೆಗೆ ಮಾರುಕಟ್ಟೆಯಲ್ಲಿ ವೇಗದ ಚಾರ್ಜಿಂಗ್ ವ್ಯವಸ್ಥೆಯನ್ನು ಹೊಂದುವ ಗುರಿ ಹೊಂದಲಾಗಿದೆ ಎಂದು ಅವರು ಹೇಳಿದ್ದಾರೆ.

## ಉತ್ತರಪ್ರದೇಶದ ಅಮೇಥಿಯಲ್ಲಿ 5 ಲಕ್ಷ ಎಕೆ-203 ಅಸಾಲ್ಟ್ ರೈಫಲ್ ಉತ್ಪಾದನೆಗೆ ಕೇಂದ್ರ ಅಸ್ತು

ರಕ್ಷಣಾ ಉತ್ಪಾದನೆಯಲ್ಲಿ ಸ್ವಾವಲಂಬನೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ಉತ್ತರ ಪ್ರದೇಶದ ಅಮೇಥಿಯ ಕೊರ್ವಾದಲ್ಲಿ ಐದು ಲಕ್ಷಕ್ಕೂ ಹೆಚ್ಚು ಎಕೆ-203 ಅಸಾಲ್ಟ್ ರೈಫಲ್‌ಗಳನ್ನು ಉತ್ಪಾದನೆ ಮಾಡಲು ಅನುಮೋದನೆ ನೀಡಿದೆ. ಈ ಕಾರ್ಯವನ್ನು ರಷ್ಯಾದ ಸಹಭಾಗಿತ್ವದಲ್ಲಿ ಮಾಡಲಾಗುತ್ತಿದೆ. ಜಾಗತಿಕ ಖರೀದಿಯಿಂದ 'ಮೇಕ್ ಇನ್ ಇಂಡಿಯಾ'ಗೆ ರಕ್ಷಣಾ ಕ್ಷೇತ್ರದಲ್ಲಿ ಸ್ವಾವಲಂಬಿಯಾಗಿ ಪರಿವರ್ತನೆಗೊಳ್ಳುತ್ತಿರುವ ಮಾದರಿಯನ್ನು ಇದು ಬಿಂಬಿಸುತ್ತದೆ.

ಈ ಯೋಜನೆ ವಿವಿಧ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳಿಗೆ ಕಚ್ಚಾ ವಸ್ತುಗಳನ್ನು ಪೂರೈಸುವ ಅವಕಾಶಗಳನ್ನು ಒದಗಿಸುತ್ತದೆ. ಹೀಗಾಗಿ ಹೊಸ ಉದ್ಯೋಗಾವಕಾಶಗಳ ಸೃಷ್ಟಿಗೂ ಕಾರಣವಾಗುತ್ತದೆ. 7.62 ಥ 39 ಮಿಮೀ ಕ್ಯಾಲಿಬರ್ ಎಕೆ-203 ರೈಫಲ್ಸ್ ಮೂರು ದಶಕಗಳಿಂದ ಸೇವೆಯಲ್ಲಿರುವ ರೈಫಲ್ಲುಗಳ ಬದಲಾಗಿ ಇವು ಬಳಕೆಯಾಗಲಿವೆ. ಎಕೆ-203 ಅಸಾಲ್ಟ್ ರೈಫಲ್‌ಗಳು, 300 ಮೀಟರ್‌ಗಳ ಪರಿಣಾಮಕಾರಿ ವ್ಯಾಪ್ತಿಯೊಂದಿಗೆ, ಹಗುರವಾದ, ದೃಢವಾದ ಮತ್ತು ಬಳಸಲು ಸುಲಭವಾದ ಆಧುನಿಕ ತಂತ್ರಜ್ಞಾನವನ್ನು ಹೊಂದಿದ್ದು, ಯೋಜಿತ ಕಾರ್ಯಾಚರಣೆಯ ಸವಾಲುಗಳನ್ನು ಎದುರಿಸಲು ಸೈನಿಕರ ಯುದ್ಧ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ.



## ಜಮ್ಮು-ಕಾಶ್ಮೀರ: ಎಲ್‌ಒಸಿ ಬಳಿಯ ಶಾರದಾ ಮಂದಿರ ಪುನರ್ ನಿರ್ಮಾಣಕ್ಕೆ ಶಂಕುಸ್ಥಾಪನೆ

ಜಮ್ಮು- ಸೇವ್ ಶಾರದ ಕಮಿಟಿ (ಎಸ್‌ಎಸ್‌ಸಿ) ಶುಕ್ರವಾರ ಜಮ್ಮು ಮತ್ತು ಕಾಶ್ಮೀರದ ಎಲ್‌ಒಸಿ ಬಳಿಯ ಟೀತ್‌ವಾಲ್‌ನ ಮಾತಾ ಶಾರದಾ ದೇವಿ ಮಂದಿರದ ಪುನರ್ ನಿರ್ಮಾಣಕ್ಕಾಗಿ ಅಡಿಪಾಯವನ್ನು ಹಾಕಿದೆ. ಪಾಕಿಸ್ತಾನ ಅಕ್ರಮವಾಗಿ ಆಕ್ರಮಿಸಿಕೊಂಡಿರುವ ಕಾಶ್ಮೀರದದಲ್ಲಿರುವ ಶತಮಾನಗಳಷ್ಟು ಹಳೆಯ ಶಾರದಾಪೀಠದ ದೇವಾಲಯಕ್ಕೆ ತೀರ್ಥಯಾತ್ರೆಯನ್ನು ಪುನರುಜ್ಜೀವನಗೊಳಿಸುವ ದೃಷ್ಟಿಯಿಂದ ಉತ್ತರ ಕಾಶ್ಮೀರದ ಕುಪ್ವಾರ ಜಿಲ್ಲೆಯಲ್ಲಿರುವ ಪುರಾತನ ದೇವಾಲಯ ಮತ್ತು ಅದರ ಕೇಂದ್ರವನ್ನು ಜೀರ್ಣೋದ್ಧಾರಗೊಳಿಸಲಾಗುವುದು ಎಂದು ಸಮಿತಿ ತಿಳಿಸಿದೆ. ಅಲ್ಲದೆ ಕೇಂದ್ರ ಅಲ್ಪಸಂಖ್ಯಾತರ ವ್ಯವಹಾರಗಳ ಸಚಿವಾಲಯದ ವಕ್ಫ್ ಅಭಿವೃದ್ಧಿ ಸಮಿತಿ ಅಧ್ಯಕ್ಷ ಹಾಗೂ ಬಿಜೆಪಿ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯ ಅಂದ್ರಾಬಿ ಅವರು ಮಂದಿರದ ಶಂಕುಸ್ಥಾಪನೆ ನೆರವೇರಿಸಿದರು. ಪಿಒಕೆಯಲ್ಲಿರುವ ಈ ಶಾರದ ಪೀಠವು ಭಾರತದ ಅಗ್ರಗಣ್ಯ ಪ್ರಾಚೀನ ವಿಶ್ವವಿದ್ಯಾಲಯಗಳಲ್ಲಿ ಒಂದಾಗಿದೆ. ಶಾರದಾ ಪೀಠವು ನೀಲಂ ನದಿಯ ದಡದಲ್ಲಿರುವ ಶಾರದಾ ಗ್ರಾಮದಲ್ಲಿ ಒಂದು ಪ್ರಮುಖ ವಿದ್ಯಾ ಕೇಂದ್ರವಾಗಿತ್ತು,ಆದರೆ ಇಸ್ಲಾಮಿಕ್ ಭಯೋತ್ಪಾದಕ ದಾಳಿಯಿಂದ ಇದು ಈ ಹಿಂದೆ ಪಾಳುಬಿದ್ದಿತ್ತು.

## ಭಾರತೀಯ ರಾಜವಂಶಗಳನ್ನು ಪಠ್ಯಪುಸ್ತಕಗಳಲ್ಲಿ ಕಡೆಗಣಿಸಲಾಗಿದೆ: ಸಂಸದೀಯ ಸಮಿತಿ

ಶಾಲಾ ಪಠ್ಯಪುಸ್ತಕಗಳಲ್ಲಿ ಐತಿಹಾಸಿಕ ವ್ಯಕ್ತಿಗಳು ಮತ್ತು ಸ್ವಾತಂತ್ರ್ಯ ಹೋರಾಟಗಾರರನ್ನು ಅಪರಾಧಿಗಳಂತೆ ಬಿಂಬಿಸಲಾಗಿದೆ. ವಿವಿಧ ಅವಧಿಗಳು ಮತ್ತು ರಾಜವಂಶಗಳ ಮಾಹಿತಿಗಳನ್ನು ತಪ್ಪಾಗಿ ನೀಡಲಾಗಿದೆ. ಸಿಖ್ ಮತ್ತು ಮರಾಠ ಇತಿಹಾಸಗಳ ಬಗ್ಗೆ ಅತ್ಯಂತ ಕನಿಷ್ಠ ರೀತಿಯ ಉಲ್ಲೇಖಗಳಿವೆ ಮತ್ತು ಮಹಿಳೆಯರ ಬಗ್ಗೆ ಅತ್ಯಂತ ಕಡಿಮೆ ಉಲ್ಲೇಖಗಳಿವೆ ಎಂದು ಸಂಸದೀಯ ಸ್ಥಾಯಿ ಸಮಿತಿ ಹೇಳಿದೆ. ಎನ್‌ಸಿಇಆರ್‌ಟಿ (ಶಿಕ್ಷಣ ಸಂಶೋಧನೆ ಮತ್ತು ತರಬೇತಿಗಾಗಿ ರಾಷ್ಟ್ರೀಯ ಮಂಡಳಿ) ಪಠ್ಯಪುಸ್ತಕಗಳ ವಿಷಯ ಮತ್ತು ವಿನ್ಯಾಸವನ್ನು ಪರಿಶೀಲಿಸಲು ರಾಜ್ಯಸಭಾ ಸಂಸದ ವಿನಯ್ ಸಹಸ್ರಬುದ್ಧೆ ಅವರ ನೇತೃತ್ವದಲ್ಲಿ ರಚಿಸಲಾದ ಸಂಸದೀಯ ಸ್ಥಾಯಿ ಸಮಿತಿಯು ಇದೇ ಮಂಗಳವಾರ ಸಂಸತ್ತಿಗೆ 'ಶಾಲಾ ಪಠ್ಯದ ವಿಷಯ ಮತ್ತು ವಿನ್ಯಾಸ ಸುಧಾರಣೆ' ವರದಿಯನ್ನು ಸಲ್ಲಿಸಿದೆ. ಈ ವರದಿಯಲ್ಲಿ, ಶಾಲೆಗಳ ಇತಿಹಾಸ ಪಠ್ಯಪುಸ್ತಕಗಳಲ್ಲಿ ವಿಜಯನಗರ ಸಾಮ್ರಾಜ್ಯ, ಚಾಲುಕ್ಯ ಅರಸರು ಮತ್ತು ದೇಶಕ್ಕೆ ಅಪಾರ ಕೊಡುಗೆ ನೀಡಿದ ವಿಕ್ರಮಾದಿತ್ಯ, ಚೋಳರು, ಗೊಂಡ್ವಾನರು ಮುಂತಾದ ಭಾರತವನ್ನು ಆಳಿದ ಶ್ರೇಷ್ಠ ರಾಜಮನೆತನಗಳನ್ನು ಕಡೆಗಣಿಸಲಾಗಿದ್ದು ಈ ತಪ್ಪುಗಳನ್ನು ಸರಿಪಡಿಸಲು ಸಮಿತಿಯು ಶಿಫಾರಸ್ಸು ಮಾಡಿದೆ.

ಅಲ್ಲದೆ ಪಠ್ಯವು ನಾಲ್ಕು ವೇದಗಳು, ಭಗವದ್ಗೀತೆ, ಜೈನಧರ್ಮ ಮತ್ತಿತರ ವಿಭಿನ್ನ ಸಾಹಿತ್ಯವನ್ನು ಒಳಗೊಂಡಿರಬೇಕು ಎಂದು ವರದಿಯಲ್ಲಿ ತಿಳಿಸಿದ್ದು, ಮಾತ್ರವಲ್ಲದೆ ಕಪೋಲಕಲ್ಪಿತ, ಪೂರ್ವಾಗ್ರಹಪೀಡಿತ ಇತಿಹಾಸವು ಅಪಾಯಕಾರಿ ಎಂದಿದೆ. ದೇಶದ ವಿವಿಧ ಪ್ರದೇಶಗಳ ಸ್ವಾತಂತ್ರ್ಯ ಹೋರಾಟಗಾರರ ಕೊಡುಗೆ ಮತ್ತು ಪಾತ್ರವನ್ನು ಪ್ರಮುಖ ಇತಿಹಾಸಕಾರರೊಂದಿಗೆ ಚರ್ಚಿಸುವ ಮತ್ತು ಪಠ್ಯದಲ್ಲಿ ಅಳವಡಿಸುವ ಅಗತ್ಯವಿದೆ ಎಂದು ಸಮಿತಿ ಹೇಳಿದೆ.

**ಓದುಗರೇ ಗಮನಿಸಿ**

ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು-560 004. ಮೊಬೈಲ್: 97391 83021

ಸಂಪಾದಕ-ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು-04. ಸಂಪಾದಕೀಯ : ಮೊ. 97312 64009 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು-18.